ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಎ ಸಿ ಸಿ ವಕೀಲರಿಂದಃ

ವಾದಿಗಳು ಮತ್ತು ಪ್ರತಿವಾದಿಗಳು ಎಂದರೆ ನನಗೆ ಗೊತ್ತಾಗುತ್ತದೆ ಎಂದರೆ ಸರಿ. ವಾದಿಗಳು ಪ್ರತಿವಾದಿಗಳ ವಿರುದ್ಧ ಯಾವ ಕಾರಣಕ್ಕಾಗಿ ದಾವೆಯನ್ನು ಹೂಡಿದ್ದಾರೆಂದು ಗೊತ್ತಿರುತ್ತದೆಯೇ ಎಂದರೆ ಸಾಕ್ಷಿಯು ನನಗೆ ಗೊತ್ತಿರುತ್ತದೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ವಾದಿಗಳು ಯಾವ ಸರ್ವೆ ನಂಃ ಜಮೀನು ಮತ್ತು ವಿಸ್ತೀರ್ಣಕ್ಕೆ ಸಂಬಂಧಪಟ್ಟಂತೆ ದಾವೆ ಮಾಡಿರುತ್ತಾರೆಂದರೆ ಸಾಕ್ಷಿಯು ನಾನು ಪಕ್ಕದ ಜಮೀನಿನವನಾಗಿದ್ದು ಅಕ್ಕಪಕ್ಕದ ಜಮೀನುದಾರರು ದಾವೆ ಮಾಡಿಕೊಂಡಿರುತ್ತಾರೆಂದು ನುಡಿಯುತ್ತಾರೆ. ನನಗೆ ಸರ್ವೆ ನಂಃ ಮತ್ತು ವಿಸ್ತೀರ್ಣ ಗೋತ್ತಿರುವುದಿಲ್ಲ. ನಾನು ನನ್ನ ಸಾಕ್ಷಿ ಪ್ರಮಾಣಪತ್ರದಲ್ಲಿ ಸರ್ವೆ ನಂಃ ಮತ್ತು ವಿಸ್ತೀರ್ಣವನ್ನು ಬರೆಸಿರುತ್ತೇನೆ. ನನ್ನ ಸಾಕ್ಷಿ ಪ್ರಮಾಣಪತ್ರವನ್ನು ವಕೀಲರು ಬರೆಸಿದ್ದು ಅದರಲ್ಲಿ ಬರೆದಿರುವ ಸರ್ವೆ ನಂಃ ಮತ್ತು ವಿಸ್ತೀರ್ಣವನ್ನು ನೋಡಿರುತ್ತೇನೆ. ಅದರಲ್ಲಿ ಬರೆದಿರುವ ಸರ್ವೆ ನಂಃ ಮತ್ತು ವಿಸ್ತೀರ್ಣ ಈಗ ನನಗೆ ನೆನಪು ಇರುವುದಿಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ವಕೀಲರು ಬರೆದಿರುತ್ತಾರೆ ಮತ್ತು ಅದನ್ನು ನಾನು ಓದಿಕೊಂಡಿರುತ್ತೇನೆ ಇಷ್ಟು ಮಾತ್ರ ನನಗೆ ಗೊತ್ತಿರುತ್ತದೆ ಎಂದರೆ ಸರಿ. ಸಾಕ್ಷಿ ಪ್ರಮಾಣಪತ್ರದಲ್ಲಿ ದಾವಾ ಸ್ವತ್ತನ್ನು ವಾದಿಯ ತಂದೆಯವರು ಖರೀದಿಮಾಡಿರುವ ಸ್ವತ್ತು ಎಂದು ಬರೆಸಿದ್ದು ಸದರಿ ಸ್ವತ್ತನ್ನು ಶ್ರೀನಿವಾಸಯ್ಯ ಎಂಬುವವರು ವಾದಿಗಳ ತಂದೆಯಾದ ಗೋವಿಂದಯ್ಯ ಎನ್ನುವವರಿಗೆ ಮಾರಾಟ ಮಾಡಿರುತ್ತಾರೆ. ಸದರಿ ವಿಚಾರವು ನಿಮಗೆ ವೈಯಕ್ತಿಕವಾಗಿ ತಿಳಿದಿರುತ್ತದೆಯೇ ಅಥವಾ ಬೇರೆಯವರಿಂದ

ತಿಳಿದುಕೊಂಡಿರುತ್ತೀರಾ ಎಂದರೆ ಸಾಕ್ಷಿಯು ನಾನೇ ಪಂಚಾಯಿತಿ ಸದಸ್ಯನಿದ್ದು ರಾಜಿ ಮಾಡಿಸುವ ಸಮಯದಲ್ಲಿ ಸದರಿ ವಿಚಾರವು ತಿಳಿದುಬಂದಿರುತ್ತದೆ ಎಂದು ನುಡಿಯುತ್ತಾರೆ. ಸದರಿ ವಿಚಾರಕ್ಕೆ ಸಂಬಂಧಪಟ್ಟಂತೆ ಸರ್ವೆ ನಂಃ ಮತ್ತು ವಿಸ್ತೀರ್ಣ ಇರುವ ಕ್ರಯದ ಪತ್ರವನ್ನು ನೋಡಿರುತ್ತೇನೆ. ಸದರಿ ಪತ್ರದಲ್ಲಿ ಸರ್ವೆ ನಂಃ ಮತ್ತು ವಿಸ್ತೀರ್ಣ ಎಷ್ಟು ಇರುತ್ತದೆ ಎಂದು ನೋಡಿರುತ್ತೀರಾ ಎಂದರೆ ಸಾಕ್ಷಿಯು ನೋಡಿರುತ್ತೇನೆ ಆದರೆ ಈಗ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ.

ನನ್ನನ್ನು ಈ ದಿನ ನ್ಯಾಯಾಲಯಕ್ಕೆ ಸಾಕ್ಷಿಹೇಳಲು ನಮ್ಮ ಪಕ್ಕದ ಜಮೀನು ದಾರರಾದ ವೆಂಕಟರಮಣಯ್ಯ, ಚಂದ್ರಪ್ಪ, ಕೃಷ್ಣಯ್ಯರವರುಗಳು ಕರೆಸಿರುತ್ತಾರೆ. ನನ್ನನ್ನು ವಕೀಲರ ಬಳಿ ವೆಂಕಟರಮಣಯ್ಯ, ಕೃಷ್ಣಯ್ಯರವರುಗಳು ಕರೆದುಕೊಂಡು ಹೋಗಿದ್ದರು. ಸಾಕ್ಷಿಗೆ ನಿಮ್ಮ ಸಾಕ್ಷಿ ಪ್ರಮಾಣಪತ್ರದಲ್ಲಿ 2017 ರಲ್ಲಿ ವಾದಿಗಳ ಸ್ವಾಧೀನದಲ್ಲಿ ಇರುವ ಸ್ವತ್ತಿನ ಬಳಿ ಬಂದು ವಾದಿಗಳನ್ನು ಜಮೀನಿನಿಂದ ಹೊರ ಹಾಕಲು ಗಲಾಟೆ ಮಾಡಿದಾಗ ಎಂದು ಬರೆಸಿದ್ದು ಅದರಂತೆ ಯಾರು ಯಾವ ಜಮೀನಿಂದ ಯಾರನ್ನು ಹೊರಕ್ಕೆ ಹಾಕಲು ಗಲಾಟೆ ಮಾಡುತ್ತಿದ್ದರು ಎಂದರೆ ಸಾಕ್ಷಿಯು ಯಾರನ್ನು ಯಾರೂ ಹೊರ ಹಾಕಿರುವುದಿಲ್ಲ ಆದರೆ ಅವರವರೇ ಗಲಾಟೆ ಮಾಡಿಕೊಳ್ಳುತ್ತಿದ್ದರೂ ಎಂದು ನುಡಿಯುತ್ತಾರೆ. ಅಲ್ಲಿ ಗಲಾಟೆ ಮಾಡುತ್ತಿದ್ದವರು ಪೋಲೀಸ್ ಠಾಣೆಯಲ್ಲಿ ದೂರನ್ನು ನೀಡಿದ ಬಗ್ಗೆ ನನಗೆ ಗೊತ್ತಿಲ್ಲ. ಸಾಕ್ಷಿಗೆ ನಾನು ಹೇಳಿದ ರೀತಿಯಲ್ಲಿ ಗಲಾಟೆ ಆಗಿದ್ದರೆ ಪೋಲೀಸರಲ್ಲಿ ದೂರು ದಾಖಲಾಗುತ್ತಿತ್ತು ಎಂದರೆ ಸಾಕ್ಷಿಯು ಆಗುತ್ತಿತ್ತೇನೋ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಸಹಿಯನ್ನು ನೋಟರಿಯವರ ಬಳಿ ಮಾಡಿರುತ್ತೇನೆ. ದಾವಾ ಆಸ್ತಿಗೆ ಸಂಬಂಧಪಟ್ಟಂತೆ ವಾದಿ ಮತ್ತು ಪ್ರತಿವಾದಿಗಳ ಮಧ್ಯೆ ರೆವೆನ್ಯೂ ನ್ಯಾಯಾಲಯದಲ್ಲಿ ಮತ್ತು ಪೋಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾದ ಬಗ್ಗೆ ನನಗೆ ಯಾವುದೂ ಗೊತ್ತಿಲ್ಲ. ನಾನು ವಾದಿಗಳಿಗೆ ಸಹಾಯ ಮಾಡವ ಉದ್ದೇಶದಿಂದ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸಾಕ್ಷಿಯು ಇಬ್ಬರಿಗೂ ಒಳ್ಳೆಯದಾಗಲೀ ಎಂದು ಸಾಕ್ಷಿ ನುಡಿಯುತ್ತಿದ್ದೇನೆ ಎಂದು ನುಡಿಯುತ್ತಾರೆ.

ಮರು ವಿಚಾರಣೆ : ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಮಹೇಶ್ ಬಿ.ಟಿ)
ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.